ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2017–18 ದಿನಾಂಕ: 21–9–2017

# ಪತ್ರಿಕಾ ಆಮಂತ್ರಣ

1. ಕರ್ನಾಟಕ ಗೃಹ ಮಂಡಳಿಯು ನಿರ್ಮಿಸಿರುವ ಬಹುಮಹಡಿ ಸಮುಚ್ಛಯಗಳಲ್ಲಿನ ಫ್ಲಾಟ್ ವಿಲೇವಾರಿ ಕುರಿತು ಕೆಹೆಚ್‌ಬಿ–ಪ್ರಾಪರ್ಟಿ ಎಕ್ಸ್ಪೋ (Property Expo)

ಉದ್ಘಾಟನೆ:
ಎಂ. ಕೃಷ್ಣಪ್ಪ,
ವಸತಿ ಸಚಿವರು

ದಿನಾಂಕ: 22–09–2017 ಶುಕ್ರವಾರ ಬೆಳಿಗ್ಗೆ 10–30 ಗಂಟೆಗೆ
ಸ್ಥಳ: ಕೆಂಗೇರಿ ಉಪನಗರ, ಕೆಹೆಚ್‌ಬಿ– ಪ್ಲಾಟಿನಂ ಕ್ಲಬ್ ಹೌಸ್, ಬೆಂಗಳೂರು

ಸೂಚನೆ: ಈ ಕಾರ್ಯಕ್ರಮಕ್ಕೆ ಮಾಧ್ಯಮದವರನ್ನು ಕರೆದೊಯ್ಯಲು ವಾಹನ ವ್ಯವಸ್ಥೆ ಮಾಡಲಾಗಿದೆ. ವಾಹನವು ಅಂದು ಬೆಳಿಗ್ಗೆ 8–30 ಗಂಟೆಗೆ ವಾರ್ತಾ ಸೌಧ, ಬೆಂಗಳೂರು ಇಲ್ಲಿಂದ ಹೊರಡಲಿದೆ. ಹೆಚ್ಚಿನ ಮಾಹಿತಿಗೆ ಶ್ರೀ ಕೆ.ಎನ್. ವಿಜಯಾನಂದ್, ವಾರ್ತಾ ಸಹಾಯಕರು, ಮೊಬೈಲ್ ಸಂಖ್ಯೆ: 99721 26265 ಅವರನ್ನು ಸಂಪರ್ಕಿಸಬಹುದಾಗಿದೆ.

**ಪತ್ರಿಕಾ ಪ್ರಕಟಣೆ**

**ಸಂಖ್ಯೆ101/221**

# ಕರ್ನಾಟಕ ಗೃಹ ಮಂಡಳಿಯ ಪ್ಲಾಟ್ Property Expo

**– ಮಾಲಿಕಯ್ಯ ಗುತ್ತೇದಾರ್**

**ಬೆಂಗಳೂರು, ಸೆಪ್ಟೆಂಬರ್ 21 ( ಕರ್ನಾಟಕ ವಾರ್ತೆ) :**

ಬೆಂಗಳೂರಿನಲ್ಲಿ ಕರ್ನಾಟಕ ಗೃಹ ಮಂಡಳಿ ನಿರ್ಮಿಸಿರುವ ಬಹುಮಹಡಿ ಸಮುಚ್ಚಯಗಳ ಪ್ಲಾಟ್‌ಗಳನ್ನು ಸ್ಥಳದಲ್ಲಿಯೇ ಹಂಚಿಕೆ ಮಾಡಲು ಸೆಪ್ಟೆಂಬರ್ 22 ರಿಂದ 24ರ ವರೆಗೆ ಮೂರು ದಿನಗಳ Property Expo ಮೇಳವನ್ನು ಕೆಂಗೇರಿ ಉಪನಗರದಲ್ಲಿನ ಕೆಹೆಚ್‌ಬಿ–ಪ್ಲಾಟಿನಂ ಕ್ಲಬ್‌ಹಾಸ್‌ನಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಕರ್ನಾಟಕ ಗೃಹ ಮಂಡಳಿಯ ಅಧ್ಯಕ್ಷರು ಮಾಲಿಕಯ್ಯ ಗುತ್ತೇದಾರ್ ತಿಳಿಸಿದರು.

ಕರ್ನಾಟಕ ಗೃಹ ಮಂಡಳಿಯ ಕೇಂದ್ರ ಕಛೇರಿಯಲ್ಲಿ ಇಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ ಕರ್ನಾಟಕ ಗೃಹ ಮಂಡಳಿಯು ಬೆಂಗಳೂರಿನ ಕೆಂಗೇರಿ ಉಪನಗರದಲ್ಲಿ, ಬಂಡೇಮಠದಲ್ಲಿ ಹಾಗೂ ಸೂರ್ಯನಗರದಲ್ಲಿ ಸುಸಜ್ಜಿತವಾದ ಹಾಗೂ ಮೂಲ ಸೌಕರ್ಯಗಳನ್ನೊಳಗೊಂಡ ವಿವಿಧ ವರ್ಗದ ಫ್ಲಾಟ್‌ಗಳನ್ನು ನಿರ್ಮಿಸಿದ್ದು, ಫ್ಲಾಟ್‌ಗಳಲ್ಲಿ ಈಗಾಗಲೇ ಕೆಲವು ಫ್ಲಾಟ್‌ಗಳನ್ನು ಹಂಚಿಕೆ ಮಾಡಲಾಗಿರುತ್ತದೆ.

ಕೆಂಗೇರಿ ಉಪನಗರದಲ್ಲಿನ ಫ್ಲಾಟಿನಂ ಬಹುಮಹಡಿ ಕಟ್ಟಡದಲ್ಲಿ ಒಟ್ಟು 808 ವಿವಿಧ ವರ್ಗದ ಫ್ಲಾಟ್‌ಗಳನ್ನು ನಿರ್ಮಿಸಿದ್ದು, 397 ಫ್ಲಾಟ್‌ಗಳನ್ನು ಈಗಾಗಲೇ ಹಂಚಿಕೆ ಮಾಡಲಾಗಿದೆ. ಪ್ರಸ್ತುತ 411 ಫ್ಲಾಟ್‌ಗಳು ಹಂಚಿಕೆಗೆ ಲಭ್ಯವಿರುತ್ತವೆ.

ಕೆಂಗೇರಿ ಬಂಡೇಮಠ ಬಡಾವಣೆಯಲ್ಲಿನ ಡೈಮೆಂಡ್ ಬಹುಮಹಡಿ ಕಟ್ಟಡದಲ್ಲಿ ಒಟ್ಟು 306 ವಿವಿಧ ವರ್ಗದ ಫ್ಲಾಟ್‌ಗಳನ್ನು ನಿರ್ಮಿಸಿದ್ದು, 110 ಫ್ಲಾಟ್‌ಗಳನ್ನು ಈಗಾಗಲೇ ಹಂಚಿಕೆ ಮಾಡಿದ್ದು, ಪ್ರಸ್ತುತ 206 ಫ್ಲಾಟ್‌ಗಳು ಹಂಚಿಕೆಗೆ ಲಭ್ಯವಿರುತ್ತವೆ. ಸೂರ್ಯನಗರ 1ನೇ ಹಂತದ ಬಡಾವಣೆಯಲ್ಲಿನ ಸೂರ್ಯ ಎಲಿಗೆನ್ಸ್ ಬಹುಮಹಡಿ ಕಟ್ಟಡದಲ್ಲಿ ಒಟ್ಟು 384 ವಿವಿಧ ವರ್ಗದ ಫ್ಲಾಟ್‌ಗಳನ್ನು ನಿರ್ಮಿಸಿದ್ದು, 58 ಫ್ಲಾಟ್‌ಗಳನ್ನು ಈಗಾಗಲೇ ಹಂಚಿಕೆ ಮಾಡಿದ್ದು, ಪ್ರಸ್ತುತ 326 ಫ್ಲಾಟ್‌ಗಳು ಹಂಚಿಕೆಗೆ ಲಭ್ಯವಿರುತ್ತವೆ.

ಉತ್ತಮ ಗುಣಮಟ್ಟದ ಫ್ಲಾಟ್‌ಗಳು ನೀರು, ವಿದ್ಯುತ್, ಒಳಚರಂಡಿ ಹಾಗೂ ಸಕಲ ಸೌಲಭ್ಯಗಳನ್ನು ಒಳಗೊಂಡಿರುತ್ತವೆ. ಫ್ಲಾಟ್‌ಗಳು ಕೂಡಲೇ ವಾಸಕ್ಕೆ ಸಿದ್ದವಿರುತ್ತವೆ. ಫ್ಲಾಟಿನಂ ಮತ್ತು ಸೂರ್ಯ ಎಲಿಗೆನ್ಸ್ ಬಹುಮಹಡಿ ಕಟ್ಟಡಗಳಲ್ಲಿ ಈಜುಕೊಳ ಹಾಗೂ ಕ್ಲಬ್ ಹೌಸ್ ಹೆಚ್ಚಿನ ಸೌಲಭ್ಯಗಳನ್ನು ಒಳಗೊಂಡಿರುತ್ತವೆ ಎಂದು ತಿಳಿಸಿದರು.

ಪಾಪರ್ಟಿ ಎಕ್ಸ್‌ಪೋ ದಸರಾ ವಿಶೇಷ ಕೊಡುಗೆಯೆಂದು ಶೇ. 2ರಷ್ಟು ವಿಶೇಷ ರಿಯಾಯಿತಿ ನೀಡಿ ಸ್ಥಳದಲ್ಲಿಯೇ ಸಾರ್ವಜನಿಕರು ಇಚ್ಚಿಸುವ ಫ್ಲಾಟ್‌ಗಳನ್ನು ಕೈಗೆಟಕುವ ದರದಲ್ಲಿ ಹಂಚಿಕೆ ಮಾಡಿ ಹಂಚಿಕೆ ಪತ್ರವನ್ನು ನೀಡಲಾಗುವುದು ಎಂದು ಕರ್ನಾಟಕ ಗೃಹ ಮಂಡಳಿಯ ಆಯುಕ್ತರಾದ ಎ.ಬಿ ಇಬ್ರಾಹಿಂ ರವರು ತಿಳಿಸಿದರು.

ಕಾರ್ಯಕ್ರಮದಲ್ಲಿ ಪ್ರಧಾನಮಂತ್ರಿ ಅವಾಸ್ ಯೋಜನೆಯಡಿ ಕ್ರೆಡಿಟ್ ಲಿಂಕ್ಡ್ ಸಬ್ಸಿಡಿ ಸ್ಕೀಂ ನಲ್ಲಿ ಖರೀದಿಸಲು ನೀಡಲಾಗಿರುವ ಸಾಲ ಸೌಲಭ್ಯಗಳನ್ನು ಫ್ಲಾಟ್ ಖರೀದಿಸುವ ಗ್ರಾಹಕರಿಗೆ ಬ್ಯಾಂಕ್ ಸಾಲ ಪಡೆಯಲು ಕರ್ನಾಟಕ ಗೃಹ ಮಂಡಳಿಯಿಂದ ಖಾತ್ರಿಯನ್ನು ನೀಡಲಾಗುವುದು. ಪ್ರಧಾನಮಂತ್ರಿ ಆವಾಸ್ ಯೋಜನೆ ಅಡಿ ರೂ.3.00 ಲಕ್ಷದೊಳಗಡೆ ವಾರ್ಷಿಕ ಆದಾಯ ಹೊಂದಿರುವ ಅರ್ಜಿದಾರರು ಒಂದು ಬಿ.ಹೆಚ್.ಕೆ. ಫ್ಲಾಟ್ ಅನ್ನು ಬ್ಯಾಂಕ್ ಸಾಲದ ಮುಖಾಂತರ ಖರೀದಿಸಿದಲ್ಲಿ, ಕೇಂದ್ರ ಸರ್ಕಾರದಿಂದಲೂ 1.5 ಲಕ್ಷಗಳಷ್ಟು ಸಹಾಯಧನ ಹಾಗೂ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಅರ್ಜಿದಾರರಿಗೆ ಹೆಚ್ಚುವರಿಯಾಗಿ ರಾಜ್ಯ ಸರ್ಕಾರದ ವತಿಯಿಂದ ರೂ.1.80 ಲಕ್ಷಗಳಷ್ಟು ವಿಶೇಷ ಸಹಾಯಧನ ಪಡೆಯಲು ಅವಕಾಶವಿರುತ್ತದೆ ಎಂದು ಕರ್ನಾಟಕ ಗೃಹ ಮಂಡಳಿಯ ಕಾರ್ಯದರ್ಶಿಗಳಾದ ದಯಾನಂದ್ ಭಂಡಾರಿ ರವರು ತಿಳಿಸಿದರು.

ಪ್ರಧಾನಮಂತ್ರಿ ಆವಾಸ್ ಯೋಜನೆ ಅಡಿ ರೂ.18.00 ಲಕ್ಷದವರೆಗೆ ವಾರ್ಷಿಕ ಆದಾಯ ಹೊಂದಿರುವ ಅರ್ಜಿದಾರರು ಬ್ಯಾಂಕ್ ಸಾಲದ ಮುಖಾಂತರ ಫ್ಲಾಟ್ ಖರೀದಿಸಿದಲ್ಲಿ, ಗರಿಷ್ಠ ರೂ. 2.67 ಲಕ್ಷದವರೆಗೆ ಕ್ರೆಡಿಟ್ ಲಿಂಕ್ಡ್ ಸಬ್ಸಿಡಿ ಸ್ಕೀಂ (CLSS) ಅಡಿ ಬಡ್ಡಿಯಲ್ಲಿ ವಿಶೇಷ ರಿಯಾಯಿತಿ ಪಡೆಯಲು ಅವಕಾಶವಿರುತ್ತದೆ ಎಂದರು.

**ಸಂಖ್ಯೆ102/222**

## ಗೆಜೆಟೆಡ್ ಪ್ರೊಬೆಷನರ್ಸ್ ಪೂರ್ವಭಾವಿ ಪರೀಕ್ಷೆ ಕೀ ಉತ್ತರ ಪ್ರಕಟ

**ಬೆಂಗಳೂರು, ಸೆಪ್ಟೆಂಬರ್ 21 ( ಕರ್ನಾಟಕ ವಾರ್ತೆ) :**

**ಕರ್ನಾಟಕ ಲೋಕಸೇವಾ ಆಯೋಗವು 2015 ನೇ ಸಾಲಿನ ಗೆಜೆಟೆಡ್ ಪ್ರೊಬೆಷನರ್ಸ್ ಪೂರ್ವಭಾವಿ ಪರೀಕ್ಷೆಯನ್ನು ದಿನಾಂಕ 20-8-207 ರಂದು ನಡೆಸಿದ್ದು, ಸದರಿ ಪರೀಕ್ಷೆಯ ಕೀ ಉತ್ತರಗಳನ್ನು ದಿನಾಂಕ 21-8-2017 ರಂದು ಅಭ್ಯರ್ಥಿಗಳ ಮಾಹಿತಿಗಾಗಿ ಪ್ರಕಟಿಸಲಾಗಿತ್ತು. ಸದರಿ ಕೀ ಉತ್ತರಗಳಿಗೆ ಸಂಬಂಧಿಸಿದಂತೆ ಅಭ್ಯರ್ಥಿಗಳು ಸಲ್ಲಿಸಿದ್ದ ಆಕ್ಷೇಪಣೆಗಳನ್ನು ವಿಷಯ ತಜ್ಞರಿಂದ ಪರಿಶೀಲಿಸಿ, ಪರಿಷ್ಕೃತ ಕೀ ಉತ್ತರಗಳನ್ನು ಆಯೋಗದ ವೆಬ್‌ಸೈಟ್ http://kpsc.kar.nic.in ನಲ್ಲಿ ಅಭ್ಯರ್ಥಿಗಳ ಮಾಹಿತಿಗಾಗಿ ಪ್ರಕಟಿಸಲಾಗಿದೆ.**

**ಸಂಖ್ಯೆ103/223**

## ಪ್ಲಾಸ್ಟಿಕ್‌ನಿಂದ ತಯಾರಿಸಲ್ಪಟ್ಟ ರಾಷ್ಟ್ರಧ್ವಜ ಬಳಕೆ ನಿಷೇದ

**ಬೆಂಗಳೂರು, ಸೆಪ್ಟೆಂಬರ್ 21 ( ಕರ್ನಾಟಕ ವಾರ್ತೆ) :**

ಯಾವುದೇ ರಾಷ್ಟ್ರೀಯ, ಸಾಂಸ್ಕೃತಿಕ ಕ್ರೀಡೆಗೆ ಸಂಬಂಧಿಸಿದ ಸಭೆ/ಸಮ್ಮೇಳನ/ಕಾರ್ಯಕ್ರಮಗಳಲ್ಲಿ ಪ್ಲಾಸ್ಟಿಕ್‌ನಿಂದ ತಯಾರಿಸಲ್ಪಟ್ಟ ರಾಷ್ಟ್ರಧ್ವಜ ಬಳಕೆಯನ್ನು ನಿಷೇಧಿಸಿ ಗೃಹ ಮಂತ್ರಾಲಯ ಆದೇಶ ಹೊರಡಿಸಿದೆ.

ಫ್ಲಾಗ್ ಕೋಡ್ ಆಫ್ ಇಂಡಿಯಾ 2002 ರ ನಿಯಮಾವಳಿಗಳನ್ವಯ, ಕಾಗದದಿಂದ ಮಾಡಿರುವ ಧ್ವಜಗಳನ್ನು ಮಾತ್ರ ಬಳಸುವಂತೆ ಹಾಗೂ ಅವುಗಳನ್ನು ಕಾರ್ಯಕ್ರಮಗಳ ನಂತರ ಸೂಕ್ತವಾಗಿ ವಿಲೇವಾರಿ ಮಾಡುವಂತೆ ಪ್ರಕಟಣೆ ತಿಳಿಸಿದೆ.

**ಸಂಖ್ಯೆ104/224**

## ವಿಶ್ವ ಹಿರಿಯ ನಾಗರಿಕರ ದಿನಾಚರಣೆ

ಬೆಂಗಳೂರು, ಸೆಪ್ಟೆಂಬರ್ 21 ( ಕರ್ನಾಟಕ ವಾರ್ತೆ) :

ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ವತಿಯಿಂದ ದಿನಾಂಕ 1-10-2017 ರಂದು ವಿಶ್ವ ಹಿರಿಯ ನಾಗರಿಕರ ದಿನಾಚರಣೆಯನ್ನು ರವೀಂದ್ರ ಕಲಾಕ್ಷೇತ್ರ, ಬೆಂಗಳೂರು ಇಲ್ಲಿ ಹಮ್ಮಿಕೊಳ್ಳಲಾಗಿರುತ್ತದೆ.

ಸದರಿ ಕಾರ್ಯಕ್ರಮದ ಅಂಗವಾಗಿ ಸೆಪ್ಟೆಂಬರ್ 22 ರಂದು ಜವಹರ ಬಾಲಭವನ, ಕಬ್ಬನ್ ಪಾರ್ಕ್, ಬೆಂಗಳೂರು ಇಲ್ಲಿ ಸಾಂಸ್ಕೃತಿಕ ಸ್ಪರ್ಧೆಯನ್ನು ಹಮ್ಮಿಕೊಳ್ಳಲಾಗಿರುತ್ತದೆ ಎಂದು ಪ್ರಕಟಣೆ ತಿಳಿಸಿದೆ.

**ಸಂಖ್ಯೆ105/225**

## ಸೆಪ್ಟೆಂಬರ್ 5 ರಂದು
## ಮಹರ್ಷಿ ವಾಲ್ಮೀಕಿ ಜಯಂತಿ

ಬೆಂಗಳೂರು, ಸೆಪ್ಟೆಂಬರ್ 21 ( ಕರ್ನಾಟಕ ವಾರ್ತೆ) :

ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿಯನ್ನು ಸೆಪ್ಟೆಂಬರ್ 5 ರಂದು ರಾಜ್ಯದ ಎಲ್ಲಾ ತಾಲ್ಲೂಕು, ಜಿಲ್ಲಾ ಕೇಂದ್ರಗಳಲ್ಲಿ ಹಾಗೂ ರಾಜ್ಯಮಟ್ಟದಲ್ಲಿ ಸರ್ಕಾರದ ವತಿಯಿಂದ ಆಚರಿಸಲಾಗುತ್ತಿದೆ.

ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿಯ ರಾಜ್ಯ ಮಟ್ಟದ ಸಮಾರಂಭವು ವಿಧಾನಸೌಧದ ಪೂರ್ವದ್ವಾರದ ಮುಂಭಾಗದಲ್ಲಿ ಹಮ್ಮಿಕೊಳ್ಳಲಾಗಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಉದ್ಘಾಟನೆ ನೆರವೇರಿಸಲಿದ್ದಾರೆ.

ಈ ಸಮಾರಂಭದಲ್ಲಿ ರಾಜ್ಯದ ಸಚಿವರು, ಸಂಸದರು, ಶಾಸಕರು ಸೇರಿದಂತೆ ಇತರ ಗಣ್ಯರು ಪಾಲ್ಗೊಳ್ಳಲಿದ್ದಾರೆ.

*****

ಜೆಡಿ:ಜಿಪಿಆರ್

ಸಂಖ್ಯೆ107/227

## ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ ವಂತಿಗೆ ಪಾವತಿಗೆ ಜನವರಿ 15 ಕಡೆ ದಿನ

ಬೆಂಗಳೂರು, ಸೆಪ್ಟೆಂಬರ್ 21 ( ಕರ್ನಾಟಕ ವಾರ್ತೆ) :

ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ ಕಾಯ್ದೆ 1965 ರ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಕಾರ್ಖಾನೆಗಳು, ಪ್ಲಾಂಟೇಶನ್‌ಗಳು, ಮೋಟಾರು ವಾಹನ ಸಂಸ್ಥೆಗಳು ಹಾಗೂ 50 ಕ್ಕಿಂತ ಹೆಚ್ಚು ಕಾರ್ಮಿಕರನ್ನು ಹೊಂದಿರುವ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳು, ಚಾರಿಟಬಲ್ ಸಂಸ್ಥೆಗಳು, ಶಿಕ್ಷಣ ಸಂಸ್ಥೆಗಳು/ಐಟಿಬಿಟಿ ಸಂಸ್ಥೆಗಳು ಕಡ್ಡಾಯವಾಗಿ ವಂತಿಕೆ ಪಾವತಿಗೆ ಜನವರಿ 15 ಕೊನೆಯ ದಿನವಾಗಿದೆ.

ಸರ್ಕಾರದ ಆದೇಶದಂತೆ ಕಾರ್ಮಿಕರು/ಮಾಲೀಕರು ಸಲ್ಲಿಸಬೇಕಾದ ವಂತಿಗೆ ಮೊತ್ತವನ್ನು ರೂ. 6:12 ರಿಂದ 20:40 ರ ಅನುಪಾತದಲ್ಲಿ 2017 ರಿಂದ ಹೆಚ್ಚಿನ ಆದೇಶಿಸಿದೆ. ಇನ್ನು ಮುಂದೆ ಒಬ್ಬ ಕಾರ್ಮಿಕನಿಗೆ ರೂ. 60 ರಂತೆ ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿ ಅಧಿನಿಯಮ 7 ಎ ಪ್ರಕಾರ ಫಾರಂ ಡಿ ನಮೂನೆಯೊಂದಿಗೆ ವಂತಿಗೆ ಪಾವತಿಸುವುದು ಕಡ್ಡಾಯವಾಗಿರುತ್ತದೆ.

ಈ ಕಾಯ್ದೆಯಡಿ ಪಾವತಿಸಬೇಕಾದ ವಂತಿಗೆ ಮೊತ್ತವನ್ನು **Welfare Commissioner, Bangalore** ಇವರ ಹೆಸರಿಗೆ ಕಳುಹಿಸುವುದು.

ಬ್ಯಾಂಕ್ ಖಾತೆಗಳ ವಿವರ

1) ಸ್ಟೇಟ್ ಬ್ಯಾಂಕ್ ಆಫ್ ಇಂಡಿಯ, ಮತ್ತೀಕೆರೆ ಮೇನ್ ರಸ್ತೆ, ಯಶವಂತಪುರ, ಬೆಂಗಳೂರು-560 022 ಅಕೌಂಟ್ ಸಂಖ್ಯೆ 30428019173, **IFSC Code No. SBIN0040605**

**2)** ಸಿಂಡಿಕೇಟ್ ಬ್ಯಾಂಕ್, ಯಶವಂತಪುರ ಬ್ರಾಂಚ್, ಬೆಂಗಳೂರು 560022 ಅಕೌಂಟ್ ಸಂಖ್ಯೆ 04282010181335, **IFSC Code No. SYNB0000428**

ನಿಯಮ ಪಾಲಿಸದ ಸಂಸ್ಥೆಗಳಿಗೆ ಶೇಕಡ 18% ಬಡ್ಡಿಯನ್ನು ದಂಡವಾಗಿ ವಿಧಿಸಬಹುದು ಹಾಗೂ ಕಲ್ಯಾಣ ಆಯುಕ್ತರಿಂದ ತಪಾಸಣೆ /ತನಿಖೆಗೆ ಒಳಪಡಬೇಕಾಗುತ್ತದೆ.

ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ 080-23570266 ಅಥವಾ **www.klwb-kar.com** ಮೂಲಕ ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಸಂಖ್ಯೆ:

## ಅಂಚೆ ಅದಾಲತ್

ಬೆಂಗಳೂರು, ಸೆಪ್ಟೆಂಬರ್ 21 ( ಕರ್ನಾಟಕ ವಾರ್ತೆ) :

ಬೆಂಗಳೂರು ನಗರ ಹಾಗೂ ಗ್ರಾಮೀಣ ವ್ಯಾಪ್ತಿಗೆ ಸಂಬಂಧಪಟ್ಟ ಅಂಚೆ ಸೇವೆಗಳ ಕುಂದುಕೊರತೆಗಳು, ಅಹವಾಲುಗಳನ್ನು ಪರಿಹರಿಸಲು ಅಂಚೆ ಅದಾಲತ್ (ಡಾಕ್ ಅದಾಲತ್) ನ್ನು ಅಕ್ಟೋಬರ್ 4 ರಂದು ಮಧ್ಯಾಹ್ನ 3.00 ಗಂಟೆಗೆ ಆಯೋಜಿಸಲಾಗಿದೆ.

ಮುಖ್ಯ ಪೋಸ್ಟ್ ಮಾಸ್ಟರ್ ಜನರಲ್, ಕರ್ನಾಟಕ ಅಂಚೆ ವಲಯ, ನಂ. 1, ಅರಮನೆ ರಸ್ತೆ, (ಮಹಾರಾಣಿ ವಿಜ್ಞಾನ ಕಾಲೇಜು ಎದರುರು), ಬೆಂಗಳೂರು – 560 001 ಕಾರ್ಯಾಲಯದಲ್ಲಿ ಅದಾಲತ್ ನಡೆಯಲಿದೆ.

ಸಾರ್ವಜನಿಕರು ತಮ್ಮ ಅಂಚೆ ಸೇವೆಗಳ ಕುಂದು ಕೊರತೆಗಳನ್ನು ತಮ್ಮ ವಿಳಾಸದೊಂದಿಗೆ ತ್ವರಿತ ಪರಿಹಾರಕ್ಕಾಗಿ ಸಹಾಯಕ ನಿರ್ದೇಶಕರು (ಪಿ.ಓ.) ಮುಖ್ಯ ಪೋಸ್ಟ್‌ಮಾಸ್ಟರ್

ಜನರಲ್‌ರವರ ಕಾರ್ಯಾಲಯ, ಕರ್ನಾಟಕ ಅಂಚೆ ವಲಯ, ಬೆಂಗಳೂರು – 560 001 ಇವರಿಗೆ ಸೆಪ್ಟೆಂಬರ್ 25 ರ ಒಳಗಾಗಿ ತಲುಪುವಂತೆ ಕಳುಹಿಸಿಕೊಡಬಹುದಾಗಿದೆ ಅಥವಾ ದೂರವಾಣಿ ಸಂಖ್ಯೆ 080–22392631, 22392543 ಮೂಲಕ ಸಂಪರ್ಕಿಸಬಹುದಾಗಿದೆ.

ಕುಂದುಕೊರತೆಗಳನ್ನು ಇಮೇಲ್ ಮುಖಾಂತರವೂ ಸಹ **tech.ka@indiapost.gov.in** ಗೆ ಕಳುಹಿಸಬಹುದಾಗಿದೆ. ಸಮಸ್ಯೆಗಳನ್ನು ಸಂಕ್ಷಿಪ್ತವಾಗಿ ನಿರ್ದಿಷ್ಟ ಅಂಕಿ ಅಂಶಗಳ ವಿವರಗಳೊಂದಿಗೆ ಕಳುಹಿಸಿಕೊಡಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

*****

ಜೆಡಿ:ಜೆಪಿಆರ್